# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.

# KARNATAKA SECONDARY EDUCATION EXAMINATION BOARD

6th Cross, Malleshwaram, Bengaluru – 560003.

## ಬಹು ಆಯ್ಕೆ ಪ್ರಶ್ನೆ ಆಧಾರಿತ ಮಾದರಿ ಪ್ರಶ್ನೆಪತ್ರಿಕೆ

## Multiple Choice Question Based Model Question Paper

## 2020 - 21

## ಪತ್ರಿಕೆ / PAPER - 02

## ವಿಷಯ : ದ್ವಿತೀಯ ಭಾಷೆ ಕನ್ನಡ

## Subject : Second Language Kannada

| | | |
|---|---|---|
| ಸಂಕೇತ ಸಂಖ್ಯೆ | : 33K | Code No : 33K |
| ಸಮಯ | : 03 ಘಂಟೆ | Time : 3 Hours |
| ಒಟ್ಟು ಪ್ರಶ್ನೆಗಳ ಸಂಖ್ಯೆ | : 40 + 40 + 40 = 120 | Total No. of Questions : 40 + 40 + 40 = 120 |
| ಗರಿಷ್ಠ ಅಂಕಗಳು | : 40 + 40 + 40 = 120 | Max. Marks : 40 + 40 + 40 = 120 |

---

ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಉತ್ತರಪತ್ರಿಕೆ ಓ.ಎಂ.ಆರ್. (OMR) ನಲ್ಲಿ ಸರಿಯಾದ ಆಯ್ಕೆಯನ್ನು ಕಪ್ಪು / ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ಶೇಡ್ ಮಾಡಿರಿ.

**40 x 1 = 40**

41. ಜಿಂಕೆಯು ಬೇಡನ ಬಾಣದ ಹೊಡೆತದಿಂದ ತಪ್ಪಿಸಿಕೊಂಡಿದ್ದು ಹೀಗೆ ಎಂದು 'ಒಣಮರದ ಗಿಳಿ' ಪಾಠದಲ್ಲಿ ಹೇಳಲಾಗಿದೆ.

    A. ಜಿಗಿದು  B. ನೆಗೆದು

    C. ಹಾರಿ  D. ಓಡಿ

42. ಮರವನ್ನು ಬಿಟ್ಟು ಹೋಗದೇ ಇರಲು ಗಿಳಿಯು ನೀಡಿದ ಸಮರ್ಥನೆ ಇದು

    A. ಮರವು ಹಣ್ಣು ಕೊಡುತ್ತದೆ.

    B. ಮರವು ಹಸಿರಿನಿಂದ ಸುಂದರವಾಗಿ ಕಾಣುತ್ತದೆ .

    C. ಮರಕ್ಕೆ ನೋವಾಗುತ್ತದೆ.

    D. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ಕಷ್ಟದ ಸಮಯದಲ್ಲಿ ಕೂಡಾ ಜೊತೆಗಿದ್ದು ಉಪಕಾರ ಸ್ಮರಣೆ ಮಾಡಬೇಕು.

43. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೀಗೆಂದು ಖ್ಯಾತರಾಗಿದ್ದಾರೆ.

    A. ರಂಗಜಂಗಮ  B. ಪಾಲ್ ಹ್ಯಾರಿಸ್

    C. ಸಾಹಿತ್ಯ ರತ್ನ  D. ಪಂಪ

**44. ಪೆನ್ನು ಖಡ್ಗಕ್ಕಿಂತ ಹರಿತ ಎಂಬುದನ್ನು ಈ ವಾಕ್ಯ ಪ್ರತಿಪಾದಿಸುತ್ತದೆ**

A. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.

B. ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ.

C. ಭೂಮಿ ಬರಡಾಗುತ್ತಿದೆ, ಸಕಾಲಕ್ಕೆ ಮಳೆ ಬರುತ್ತಿಲ್ಲ.

D. ಹಲವರ ಬದುಕನ್ನು ಬದಲಾಯಿಸಬಲ್ಲ ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಲ್ಲ ಬರೆವಣಿಗೆ ಶಕ್ತಿಶಾಲಿಯಾದುದು.

**45. ಇಂದು ರೈತರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಒಂದು**

A. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ.

B. ಬರೆವಣಿಗೆ ಪರಿಣಾಮಕಾರಿಯಾಗಿದೆ.

C. ರಾಜಕಾರಣಿಗಳೂ ವ್ಯವಸಾಯವನ್ನೇ ಅವಲಂಬಿಸಿ ಬದುಕುತ್ತಿದ್ದಾರೆ.

D. ದೇಶದ ಪ್ರಗತಿ ಮಸಿಯನ್ನು ಅವಲಂಬಿಸಿದೆ.

**46. ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಪುಟ್ಟರಾಜರ ಮನಸ್ಥಿತಿ ಹೀಗಿತ್ತು**

A. ನಾನೊಬ್ಬ ಅಂಧ ಬಾಲಕ ನನ್ನಿಂದ ಏನಾಗಲು ಸಾಧ್ಯ ?

B. ಜಗತ್ತು ಕಾಣದ ನನಗೆ ಜಗತ್ತಿಗೆ ಏನು ಕೊಡಲು ಸಾಧ್ಯ ?

C. ಇದ್ದಷ್ಟು ದಿನ ಗುರು ಸೇವೆ ಮಾಡಿದರಾಯಿತು.

D. ಗುರುಗಳ ನಡೆಯೇ ಮಂತ್ರ ,ಅವರ ನಡೆಯೇ ನನಗೆ ಆಚಾರವಾಗಬೇಕು.

**47. ಶಿಷ್ಯರ ಅಭಿಲಾಷೆಗೆ ತಕ್ಕಂಥ ಜ್ಞಾನ ಕೊಡುವ ಶಕ್ತಿ ಇವರಿಗೆ ಇರುತ್ತದೆ**

A. ವಿದ್ವಾಂಸರಿಗೆ B. ಭಕ್ತರಿಗೆ

C. ಶ್ರೇಷ್ಠ ಗುರುವಿಗೆ D. ತಂದೆಗೆ

**48. ಪುಟ್ಟರಾಜ ಗವಾಯಿಗಳಿಗೆ ದೊರೆತ ಪ್ರಶಸ್ತಿಗಳಲ್ಲಿ ಇದು ಒಂದು.**

A. ಪದ್ಮಶ್ರೀ B. ಸಾಹಿತ್ಯ ಅಕಾಡೆಮಿ

C. ಪದ್ಮಭೂಷಣ D. ಪಂಪ

**49. ಹಕ್ಕಿಗಳು ಎತ್ತರದ ತುದಿ, ಕಣಿವೆ, ಬಿಲ, ದ್ವೀಪ, ನೀರಿನ ಮೇಲೆ ಗೂಡು ಕಟ್ಟಲು ಕಾರಣ,**

A. ಸೌಂದರ್ಯ ಪ್ರಜ್ಞೆ

B. ಹಾರಾಡುವ ಸಾಮರ್ಥ್ಯ

C. ಚೆನ್ನಾಗಿ ಗಾಳಿ ಬರಲೆಂದು

D. ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು

**50. ಗ್ಯಾನೆಟ್ ಹಕ್ಕಿ ಗೂಡನ್ನು ಈ ವಸ್ತುಗಳಿಂದ ಅಲಂಕರಿಸಿತ್ತು.**

A. ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆ, ನೀಲಿ ಸೀಸೆಯ ಚೂರು

B. ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆ, ಬಣ್ಣದ ಗಾಜು

C. ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆ, ಬಟ್ಟೆಯ ಚಿಂದಿ

D. ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆ, ಹೊಳೆವ ಕಲ್ಲು

**51. ಗೋಪಾಲನ ಬೆಳಗಿನ ಮುಖ್ಯ ಕೆಲಸ ಇದಾಗಿತ್ತು.**

A. ಶಾಲೆಗೆ ಹೋಗುವುದು

B. ನೂಲುವುದು

C. ಹೂಗಳನ್ನು ಆಯ್ದು ತರುವುದು

D. ದನ ಮೇಯಿಸುವುದು

**52. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಇದು**

A. ಹೇಗೆ ಇಳಿಯುತ್ತಾರೆ ನೋಡುತ್ತೇನೆ

B. ಬುನಾದಿ ಕೆಡವುತ್ತೇನೆ

C. ಹೇಗೆ ಹತ್ತುತ್ತಾರೆ ನೋಡುತ್ತೇನೆ

D. ಎತ್ತಿಹಿಡಿಯುತ್ತೇನೆ

**53. ಏಣಿಗೆ ಬೀಳುವ ಭಯವಿಲ್ಲ ಏಕೆಂದರೆ**

A. ಏಣಿ ಭಾರ ಹೊತ್ತಿಲ್ಲ.

B. ಏಣಿಗೆ ಭಾರ ಹೊತ್ತವರ ಕಾಳಜಿಯಿಲ್ಲ.

C. ಆನೆಭಾರ ಹೊತ್ತು ಗಟ್ಟಿನೆಲದಲ್ಲಿ ಕಾಲೂರಿ ನಿಂತಿದೆ.

D. ಮೇಲೇರಿದ್ದೇನೆಂಬ ಜಂಭವಿದೆ.

**54. ಕಾಡು ಕಾಡು ಅಲೆದ ಸಿದ್ಧಾರ್ಥನಿಗೆ,**

A. ಕತ್ತಲೆ ಹೊಳೆಯಿತು

B. ಬೆಳಕು ಹೊಳೆಯಿತು

C. ನಾಡಿನರ್ಥ ಹೊಳೆಯಿತು

D. ಕಾಡು ಹೊಳೆಯಿತು

**55. 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು' ಎಂಬ ಜೀವನಚರಿತ್ರೆ ರಚನಕಾರರು**

A. ಗೋಪಾಲಕೃಷ್ಣ ಅಡಿಗ

B. ರಮೇಶ ಗೌಡ ಎಂ.ಕೆ.

C. ಕುವೆಂಪು

D. ಸಿ.ಪಿ.ಕೆ.

**56. ಗೊತ್ತು ಗುರಿಯು ಇಲ್ಲದಂತೆ ಸಿದ್ಧಾರ್ಥನು,**

A. ಕಾಡಿಗೆ ಹೋದನು

B. ಮನೆಗೆ ಹೋದನು

C. ಬೀದಿಯಲ್ಲಿ ನಡೆದನು

D. ಕತ್ತಲಲ್ಲಿ ನಡೆದನು

57. ಸಿದ್ಧಾರ್ಥನು ಅರಿತ ಬದುಕಿನ ಗೂಢಾರ್ಥ

A. ತಪಸ್ಸು ಮಾಡಬೇಕು.
B. ಕಾಡಿನಲ್ಲಿ ವಾಸ ಮಾಡಬೇಕು.
C. ತಪಸ್ಸಿಗಿಂತ ಜೀವಪ್ರೀತಿ ದೊಡ್ಡದು.
D. ಸುಖ, ವೈಭೋಗಗಳಿಂದ ಜೀವನ ಮಾಡಬೇಕು.

58. 'ಸದ್ದು ಮಾಡದಿರು' ಕವಿತೆಯು ನೀಡುವ ಸಂದೇಶ,

A. ಜೀವನದಲ್ಲಿ ನಾವು ಸಿಡಿಮದ್ದಿನ ರೀತಿ ಇರಬೇಕು.
B. ಹಸೀ ಸೌದೆಯ ರೀತಿ ಬರೀ ಸದ್ದು ಮಾಡಬೇಕು.
C. ಕೂಗಾಟದಿಂದ ಪ್ರಯೋಜನವಿದೆಯೆಂದು ತಿಳಿಯಬೇಕು.
D. ಶಾಂತಿಯಿಂದ ಬದುಕಿ ಕರ್ತವ್ಯವನ್ನು ಮುಗಿಸಬೇಕು.

59. ತಟ್ಟೆಯಲ್ಲಿ ಕರ್ಪೂರ ಹೀಗೆ ಕರಗುತ್ತದೆ

A. ಮೌನವಾಗಿ
B. ಗದ್ದಲದಲ್ಲಿ
C. ಕೋಪದಲ್ಲಿ
D. ಕೂಗಾಟದಲ್ಲಿ

60. ಒಂದು ಬಾಣಕೆ ಗುರಿಯು ಹಲವಿರುವುದುಂಟೇ ಎಂದು ಕವಿ ಉದಾಹರಣೆ ನೀಡಿರುವುದು,

A. ಹೆಗ್ಗುರಿಯ ಸಾಧನೆಗಾಗಿ
B. ಊರು ಸೇರಲು
C. ಒಂದೇ ಗುರಿಯಿಂದ ಬಾಣ ಬಿಡಲು
D. ಬಾಳ್ವೆ ದೂಡಲು

61. 'ಗುರಿ' ಪದ್ಯದ ಆಕರ ಕೃತಿ

A. ಭಾವತರಂಗ
B. ಭೂಮಿಗೀತ
C. ಆಕಾಶ ದೀಪ
D. ಸಮಗ್ರ ಕಾವ್ಯ

62. ಬಾಗಿದ ಕುಣಿಗಲ್ ಕೆರೆಯನ್ನು ಜನಪದರು ಹೋಲಿಸಿರುವುದು,

A. ನಿಂಬೆ ಹಣ್ಣಿಗೆ
B. ಸೀಬೆ ಹಣ್ಣಿಗೆ
C. ಬಾಳೆ ಹಣ್ಣಿಗೆ
D. ಮಾವಿನ ಹಣ್ಣಿಗೆ

63. ವೇಷದಂತಾಚರಣೆ ಇಲ್ಲದನ್ನಕ್ಕ,

A. ಕೆರೆಯ ತೋಡಿ ಫಲವೇನಯ್ಯ
B. ವೇದಾಂತವನೋದಿ ಫಲವೇನಯ್ಯ
C. ದಯವಿದ್ದರೆನಯ್ಯ
D. ವೇಷ ಧರಿಸಿ ಫಲವೇನಯ್ಯ

**64. ಅಕ್ಕಮಹಾದೇವಿಯ ವಚನಗಳ ಅಂಕಿತ**

A. ಚೆನ್ನಮಲ್ಲಿಕಾರ್ಜುನ B. ಕೂಡಲಸಂಗಮದೇವ

C. ಸೊನ್ನಲಿಗೆ ಸಿದ್ದರಾಮ D. ಗುಹೇಶ್ವರ

**65. ಅರ್ಜುನನು ಈತನನ್ನು 'ನಾಡನರಿ' ಎಂದು ಕರೆದಿರುವನು**

A. ಇಂದ್ರ B. ವಿರಾಟರಾಜ

C. ಕೌರವ D. ಉತ್ತರ

**66. ಸುರರ ಸತಿಯರ ಸ್ಥಾನವನ್ನು ಇವರು ತುಂಬುತ್ತಾರೆ.**

A. ಗೋಪಿಕೆಯರು B. ದೇವತೆಗಳು

C. ಅರಮನೆಯ ನಾರಿಯರು D. ಮೇನಕೆಯರು

**67. 'ಮಹಾನುಭಾವ' ಈ ಪದದಲ್ಲಿರುವ ಸಂಧಿ**

A. ಸವರ್ಣ ದೀರ್ಘ ಸಂಧಿ B. ಗುಣ ಸಂಧಿ

C. ಆದೇಶ ಸಂಧಿ D. ಲೋಪ ಸಂಧಿ

**68. 'ಭೂಮಿ' ಪದದ ತದ್ಭವ ರೂಪ**

A. ಭೂ B. ಭುವಿ

C. ವಸುಧೆ D. ಧರೆ

**69. 'ಬುದ್ಧಿವಂತ' ಈ ಪದ ನಾಮಪದದ ಈ ಪ್ರಕಾರಕ್ಕೆ ಸೇರಿದೆ**

A. ರೂಢನಾಮ B. ಅಂಕಿತನಾಮ

C. ಅನ್ವರ್ಥ ನಾಮ D. ಸರ್ವನಾಮ

**70. 'ಸಲ್ಮಾ ಶಾಲೆಗೆ ಹೋಗುವಳು' ಈ ವಾಕ್ಯವಿರುವ ಕಾಲ**

A. ಭೂತಕಾಲ B. ವರ್ತಮಾನ ಕಾಲ

C. ಭವಿಷ್ಯತ್ ಕಾಲ D. ತತ್ಕಾಲ

**71. 'ದ್ವಂದ್ವ ಸಮಾಸ' ಕ್ಕೆ ಉದಾಹರಣೆಯಾದ ಪದವಿದು**

A. ಗಿಡಮರಬಳ್ಳಿ B. ಹೆಜ್ಜೇನು

C. ಕೈಮುಟ್ಟಿ D. ಮರಗಾಲು

72. **'ಏಕಾಂಗಿ' ಪದದ ಅರ್ಥ**

A. ಅಂಗಿ
B. ಏಕ
C. ಅಂಗೈ
D. ಒಬ್ಬಂಟಿ

73. **"ಆ ಕಾಣದ ದೇವರು ಇದ್ದಾನೋ ಇಲ್ಲವೋ, ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು" ಎಂದು ಹೇಳಿದವರು**

A. ವೈದ್ಯರು
B. ರತ್ನ
C. ಮಗು
D. ಭೀಮನಾಯಕ

74. **ಭೀಮನಾಯಕನ ಹೃದಯವನ್ನು ತಟ್ಟಿದ ವೈದ್ಯರ ಮಾತುಗಳಿವು,**

A. ಕಾಯುವುದು ದೇವರ ಕೆಲಸ ಕೊಲ್ಲುವುದು ರಾಕ್ಷಸರ ಕೆಲಸ.
B. ದೇವರು ದಯಾಶಾಲಿ ಕೆಡುಕನ್ನಂತೂ ಮಾಡನು.
C. ಹಾವಿನಂತಹ ದುಷ್ಟ ಜಂತು ಕೆಣಕದೇ ಯಾರನ್ನೂ ಹಿಂಸಿಸದು.
D. ವೈದ್ಯಕ ಪ್ರಾವೀಣ್ಯಕ್ಕೆ ದೊರೆಯುವ ಪ್ರತಿಫಲ ಅಷ್ಟೇ.

75. **"ಕೈ ಕೆಸರಾದರೆ ಬಾಯಿ ಮೊಸರು" ಈ ಗಾದೆ ಮಾತಿನ ತಾತ್ಪರ್ಯ**

A. ಕೈ ಕೆಸರಾದರೆ ಮಾತ್ರ ಮೊಸರು ಸಿಗುತ್ತದೆ.
B. ಮೊಸರು ತುಂಬಾ ದುಬಾರಿ.
C. ಕಷ್ಟ ಪಟ್ಟು ದುಡಿದರೆ ಉತ್ತಮ ಜೀವನ ಸಿಗುತ್ತದೆ.
D. ಕೆಸರಿನಲ್ಲಿ ಕೆಲಸ ಮಾಡುವುದು ಒಳ್ಳೆಯದು.

76. **"ಸೀತೆಯ ಮುಖಕಮಲ ಅರಳಿತು" ಇಲ್ಲಿರುವ ಅಲಂಕಾರ**

A. ರೂಪಕಾಲಂಕಾರ
B. ಉಪಮಾಲಂಕಾರ
C. ದೃಷ್ಟಾಂತಾಲಂಕಾರ
D. ಉತ್ಪ್ರೇಕ್ಷಾಲಂಕಾರ

77. **ಅಧಿಕಾರಿಗಳಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ**

A. ಮಾತೃಶ್ರೀ
B. ಮಾನ್ಯರೇ
C. ಆತ್ಮೀಯರೇ
D. ಸ್ನೇಹಿತರೇ

**78.** **'ಎಮ್ಮರಮನೆಯ' ಈ ಪದದಲ್ಲಿರುವ ಮಾತ್ರೆಗಳ ಸಂಖ್ಯೆ**

A. 6 B. 7

C. 8 D. 9

**79.** **'ಬಲಗಾಲಿಂದ' ಪದದಲ್ಲಿರುವ ವಿಭಕ್ತಿ ಪ್ರತ್ಯಯ**

A. ಉ B. ಅನ್ನು

C. ಅಲ್ಲಿ D. ಇಂದ

**80.** **'ಚೆಂದಿರಾಮ' ಪದದ ಗ್ರಾಂಥಿಕ ರೂಪ**

A. ಚೆಂದ B. ರಾಮಚಂದ್ರ

C. ಚಂದ್ರಮ D. ಇಂದ್ರ

## ಕಚ್ಚಾ ಕಾರ್ಯಕ್ಕಾಗಿ / For Rough Work